ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1965
ಸದಸ್ಯರ ಹೆಸರು	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	23.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ MSME ಕಲ್ಲು ಗಣಿಗಾರಿಕೆಗಳಿಗೆ 2020 ಮಾರ್ಚ್ ನಲ್ಲಿ ತಿದ್ದುಪಡಿ ತಂದ ನಂತರ, ಹಳೆಯ ಅರ್ಜಿಗಳಿಗೆ ತಹಶೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳು, ಅರಣ್ಯ ಇಲಾಖಾ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿ, ಟಾಸ್ಕ್ ಫೋರ್ಸ್ ಸಮಿತಿ ಒಪ್ಪಿಗೆ ನೀಡಿದ ಮನವಿಗಳಿಗೆ ಪರವಾನಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಿನಾಂಕ 12.08.2016 ರ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ಪ್ರಕಾರ ಅಲಂಕಾರಿಕ ಶಿಲೆಗಳ ಕಲ್ಲುಗಣಿ ಗುತ್ತಿಗೆಯನ್ನು ಮಂಜೂರು ಮಾಡಲು ಸರ್ಕಾರದ ಅನುಮೋದನೆ ಅಗತ್ಯವಿದೆ. ಅದೇ ಕಲ್ಲುಗಣಿ ಗುತ್ತಿಗೆಯನ್ನು ಮಂಜೂರು ಮಾಡಲು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ. ಆದರೆ ಈ ಪ್ರಕ್ರಿಯೆಯನ್ನು ತಿದ್ದುಪಡಿ ನಿಯಮಗಳು ಜಾರಿಗೆ ಬಂದ ಎರಡು ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕು. ದಿನಾಂಕ 30.06.2020 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2020 ಜಾರಿಗೆ ಬಂದಿದ್ದು, ಅದರಲ್ಲಿ, ಈ ಎರಡು ವರ್ಷಗಳ ಅವಧಿಯನ್ನು ತೆಗೆದು ಹಾಕಿ, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಕಲ್ಲುಗಣಿ ಗುತ್ತಿಗೆಯನ್ನು ಮಂಜೂರಾತಿ ನೀಡಲು ನಿಯಮ 8-ಬಿ(2)(ಇ) ರಡಿ ಅವಕಾಶ ಕಲ್ಪಿಸಲಾಗಿದೆ. ದಿನಾಂಕ 12.08.2016ರ ತಿದ್ದುಪಡಿ ನಿಯಮಗಳ ನಿಯಮ 8ಬಿ(2) ರಲ್ಲಿ ಯಾವ ರೀತಿಯ ಅರ್ಜಿಗಳು ರಕ್ಷಿಸಲ್ಪಡುತ್ತದೆ ಎಂಬುದನ್ನು ವಿವರಿಸಲಾಗಿದ್ದು, ಇದರಂತೆ ರಕ್ಷಿಸಲ್ಪಟ್ಟ ಅರ್ಜಿಗಳನ್ನು ಪೂರ್ವಾನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲ್ಪಡುತ್ತದೆ. ಸರ್ಕಾರವು ಇದನ್ನು ಪರಿಶೀಲಿಸಿ ನಿಯಮ 8-ಬಿ(2)(ಇ) ರಂತೆ ಅನುಮೋದನೆ ನೀಡುವುದು ಪದ್ಧತಿಯಾಗಿರುತ್ತದೆ.

---2

ಆ)	ಬಂದಿದ್ದಲ್ಲಿ, ಈ ರೀತಿಯ ಎಷ್ಟು ಮನವಿಗಳು ಬಾಕಿ ಉಳಿದಿರುತ್ತವೆ; ಪರವಾನಗಿ ನೀಡದಿರಲು ಕಾರಣವೇನು; ಕಂದಾಯ ಹಾಗೂ ಖಾಸಗಿ ಭೂಮಿಗಳಲ್ಲಿ ಜಿಲ್ಲಾವಾರು ಬಾಕಿಯಿರುವ ಮನವಿಗಳೆಷ್ಟು; (ಮಾಹಿತಿ ನೀಡುವುದು)	ಖಾಸಗಿ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ರಕ್ಷಿಸಲ್ಪಟ್ಟ ಅರ್ಜಿಗಳು ಇರುವುದಿಲ್ಲ. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8–ಬಿ (2) ರಲ್ಲಿ ವಿವರಿಸಿರುವ ಪ್ರಕ್ರಿಯೆಗಳಿಗೆ ಅನುಗುಣವಾಗಿ ಇಲ್ಲದಿರುವ ಅರ್ಜಿಗಳು ರಕ್ಷಿತ ಅರ್ಜಿಗಳ ವ್ಯಾಪ್ತಿಯೊಳಗೆ ಬರುವುದಿಲ್ಲ. ಈ ವ್ಯಾಖ್ಯೆಯೊಳಗೆ ಬಾರದಿರುವ ಅರ್ಜಿಗಳು ಬಾಕಿ ಉಳಿಯಲು ಮತ್ತು ಪರವಾನಗಿ ನೀಡದಿರಲು ಕಾರಣವಾಗಿರುತ್ತದೆ. ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಎಲ್ಲಾ ದಾಖಲೆಗಳು ಸಮರ್ಪಕವಾಗಿದ್ದರೂ ಕೆಲವು ಅರ್ಜಿಗಳನ್ನು ಕಾನೂನುಬಾಹಿರವಾಗಿ ವಜಾ ಮಾಡಿರುವುದರಿಂದ MSME ಕೈಗಾರಿಕೆ ಕಲ್ಲುಗಣಿ ಕ್ರಷರ್‌ಗಳ ಮಾಲೀಕರು ಬ್ಯಾಂಕ್‌ಗಳಲ್ಲಿ ಸಾಲ ಪಡೆದು, ಮರುಪಾವತಿಸಲಾಗದೆ, ಉದ್ಯೋಗಿಗಳು ಕೆಲಸವಿಲ್ಲದೆ ಜೀವನವು ದುಸ್ತರವಾಗಿರುವುದನ್ನು ಸರ್ಕಾರ ಗಮನಿಸಿದೆಯೇ;	ನಿಯಮ 8–ಬಿ(2) ರಂತೆ ಸಮರ್ಪಕವಾಗಿರುವ ಅರ್ಜಿಗಳನ್ನು ವಜಾ ಮಾಡಿರುವುದಿಲ್ಲ.
ಈ)	ಈ ನಿಟ್ಟಿನಲ್ಲಿ ಬಾಕಿಯಿರುವ ಮನವಿಗಳನ್ನು ಮರುಪರಿಶೀಲಿಸಿ, ಪರವಾನಗಿ ನೀಡುವ ಬಗ್ಗೆ ಸರ್ಕಾರ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ನಿಯಮ 8–ಬಿ(2) ರಂತೆ ಸಮರ್ಪಕವಾಗಿರುವ ಅರ್ಜಿಗಳನ್ನು ವಿಲೇವಾರು ಮಾಡುವ ಬಗ್ಗೆ ಕ್ರಮವು ಚಾಲ್ತಿಯಲ್ಲಿರುತ್ತದೆ.

ಸಂಖ್ಯೆ ಸಿಐ 229 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

Saved Application ಗಳ ವಿಲೇವಾರಿ ಹಂತ

ಕ್ರ. ಸಂ.	ಜಿಲ್ಲೆ	ಸ್ವೀಕೃತವಾಗಿದ್ದ Saved applications ಗಳ ಪ್ರಸ್ತಾವನೆಗಳ ಸಂಖ್ಯೆ	ಸರ್ಕಾರಕ್ಕೆ ಕಳುಹಿಸಿರುವ ಪ್ರಸ್ತಾವನೆಗಳ ಸಂಖ್ಯೆ	ಸ್ಪಷ್ಟೀಕರಣ ಕೋರಿ ಜಿಲ್ಲಾ ಕಛೇರಿಗೆ ಹಿಂತಿರುಗಿಸಿರುವ ಪ್ರಸ್ತಾವನೆಗಳ ಸಂಖ್ಯೆ	ಕೇಂದ್ರ ಕಛೇರಿಯಲ್ಲಿ ಬಾಕಿ ಇರುವ ಪ್ರಸ್ತಾವನೆಗಳ ಸಂಖ್ಯೆ	ಷರಾ
1	ಕೋಲಾರ	63	63	0	0	-
2	ಚಿಕ್ಕಬಳ್ಳಾಪುರ	26	24	2	-	-
3	ತುಮಕೂರು	59	16	19	24	24 ಅರ್ಜಿಗಳು Insufficient Gomala ಮತ್ತು ಉಪ ವಿಭಾಗಾಧಿಕಾರಿ ರವರ ಹಾಗೂ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ಪ್ರತ್ಯೇಕವಾಗಿ ವರದಿ ಸಲ್ಲಿಸಿರುವ ಪ್ರಕರಣಗಳಾಗಿದ್ದು, ಈ ಸಂಬಂಧ ದಿನಾಂಕ: 11-01-2021 ರಂದು ಸರ್ಕಾರದ ಮಾರ್ಗದರ್ಶನ ಕೋರಿ ಪತ್ರಬರೆಯಲಾಗಿದೆ.
4	ಯಾದಗಿರಿ	4	2	-	2	02 ಅರ್ಜಿಗಳು ಸರ್ಕಾರಿ ಪರಂಪೋಕ ಜಮೀನಾಗಿದ್ದು, ಈ ಸಂಬಂಧ ದಿನಾಂಕ: 11-01-2021 ರಂದು ಸರ್ಕಾರದ ಮಾರ್ಗದರ್ಶನ ಕೋರಿ ಪತ್ರಬರೆಯಲಾಗಿದೆ.
5	ಕೊಪ್ಪಳ	5	1	-	4	04 ಅರ್ಜಿಗಳು ಸರ್ಕಾರಿ ಪರಂಪೋಕ ಜಮೀನಾಗಿದ್ದು, ಈ ಸಂಬಂಧ ದಿನಾಂಕ: 11-01-2021 ರಂದು ಸರ್ಕಾರದ ಮಾರ್ಗದರ್ಶನ ಕೋರಿ ಪತ್ರಬರೆಯಲಾಗಿದೆ.
6	ಬೆಂಗಳೂರು (ಗ್ರಾ)	35	31	4	-	-
7	ಬಳ್ಳಾರಿ	28	28	-	-	-
8	ಉಡುಪಿ	8	2	6	-	-
9	ಚಾಮರಾಜನಗರ	13	8	-	05	
10	ಚಿತ್ರದುರ್ಗ	38	23	15	-	ಹಿಂತಿರುಗಿಸಿರುವ 15 ಪ್ರಕರಣಗಳು ಜೋಗಿಮಟ್ಟಿ ಪರಿಸರ ಸೂಕ್ಷ್ಮವಲಯ ವ್ಯಾಪ್ತಿಯೊಳಗೆ ಬರುತ್ತಿರುವ ಅರ್ಜಿಗಳಾಗಿರುತ್ತವೆ.
11	ಚಿಕ್ಕಮಗಳೂರು	7	4	3	-	-

12	ಬೆಂಗಳೂರು ನಗರ	1	-	1	-	ಕಟ್ಟಡ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಸಂಬಂಧ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-8(5)(iii) ರಂತೆ ದಿ:12-08-2016ರ ಪೂರ್ವದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ ಸ್ವೀಕೃತವಾಗದೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ನಿರಾಕ್ಷೇಪಣಾ ಪತ್ರ ಸ್ವೀಕೃತವಾಗಿದ್ದು, ದಿ:12-08-2016 ರ ನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ ಪಡೆದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅನುಮೋದನೆಗೊಂಡಿರುವ ಪ್ರಕರಣಗಳಾಗಿದ್ದು, ಈ ಸಂಬಂಧ ದಿ:11-01-2021 ರಂದು ಸರ್ಕಾರದ ಮಾರ್ಗದರ್ಶನ ಕೋರಿ ಪತ್ರ ಬರೆಯಲಾಗಿದೆ.
13	ರಾಮನಗರ	21	17	4	0	-
14	ಹಾಸನ	3	-	-	3	ಅರ್ಜಿಗಳ ವಿಲೇವಾರಿ ಸಂಬಂಧ ದಿ:11-01-2021 ರಂದು ಸರ್ಕಾರದ ಮಾರ್ಗದರ್ಶನ ಕೋರಿ ಪತ್ರ ಬರೆಯಲಾಗಿದೆ.
15	ದಾವಣಗೆರೆ	6	4	-	2	-
16	ಹಾವೇರಿ	4	-	4	-	
	ಒಟ್ಟು	321	223	58	40	-

CI 229 mmn 2021

Deputy Director (Min. Admn)
Dept. of Mines & Geology
Bangalore-560001